# ಹೆಣ್ಣು ಒಂಟಿಯಾಗಿರುವುದು ತಪ್ಪೇ?



ಒಂಟಿಯಾಗಿರುವ ಮಧ್ಯೆವಯಸ್ಕ ಅಥವಾ ಇಳಿವಯಸ್ಸಿನ ಮಹಿಳೆಯರ ಬದುಕು ಹಸನಾಗಲು ನಮ್ಮ ಸಮಾಜ ಏನೆಲ್ಲ ಮಾಡಬಹುದು?

■ ಡಾ. ಲೀಲಾವತಿ ದೇವದಾಸ್

ಸಾಂಕೇತಿಕ ಚಿತ್ರ: ಕೇಶವ ವಿಟ್ಲ

ಯೌವನದಲ್ಲಿ, ಪ್ರೌಢ ವಯಸ್ಸಿನಲ್ಲಿ ಹಾಗೂ ಇಳಿವಯಸ್ಸಿನಲ್ಲಿ ಒಂಟಿಯಾಗಿರುವ ಹೆಣ್ಣುಮಕ್ಕಳ ಸಂಖ್ಯೆ ಇಂದು ಹೆಚ್ಚುತ್ತಿದೆ. ಒಂಟಿ ಹೆಣ್ಣಿನ ಬಗ್ಗೆ ನಮ್ಮ ಸಮಾಜಕ್ಕಿರುವ ಧೋರಣೆ ಆದಷ್ಟು ಬೇಗ ಬದಲಾಗಬೇಕಿದೆ. ಒಂಟಿ ಹೆಣ್ಣು ಸಂತೋಷವಾಗಿರಬಾರದೆ? ಅದಕ್ಕಾಗಿ ನಾವು ಮಾಡಬೇಕಾದ್ದು ಏನಿದೆ?

ಯಾವುದೇ ಹೆಣ್ಣುಮಗು, ತಂದೆ ತಾಯಿಗಳನ್ನು ಕಳೆದುಕೊಂಡಾಗ ಅನಾಥವಾಗುತ್ತದೆ. ಅದರ ಸಮಸ್ಯೆಯೇ ಬೇರೆ, ಪರಿಹಾರಗಳೂ ಬೇರೆಯೇ. ಆದರೆ, ಹೆಣ್ಣಿಗೆ ವಯಸ್ಸಾದಂತೆಲ್ಲಾ ಅವಳಿಗೆ ಮದುವೆಯಾಗದಿದ್ದರೆ ಅಥವಾ ಮದುವೆಯಾದ ಮೇಲೆ ಗಂಡನನ್ನು ಬಿಟ್ಟಿದ್ದರೆ, ಗಂಡನೇ ಬಿಟ್ಟಿದ್ದರೆ ಅಥವಾ ಗಂಡ ಸತ್ತಿದ್ದರೆ ಪರಿಸ್ಥಿತಿಯನ್ನು ಎದುರಿಸುವುದು ಹೇಗೆ? ಮಕ್ಕಳೂ ಇಲ್ಲದಾಗ ಅಥವಾ ಮಕ್ಕಳು ಬೆಳೆದು ತಮ್ಮ ತಮ್ಮ ಕೆಲಸಗಳಿಗಾಗಿ ದೂರ ನೆಲೆಸಿದ್ದಾಗ, ಹೆಣ್ಣು ತನ್ನ ಯೌವನದಲ್ಲಿ, ಪ್ರೌಢ ವಯಸ್ಸಿನಲ್ಲಿ ಒಂಟಿಯಾಗುತ್ತಾಳೆ. ಇಂತಹ ಸಂದರ್ಭಗಳಲ್ಲಿ ಅವಳನ್ನು ನಮ್ಮ ಸಮಾಜ, ವಾರೆಗಣ್ಣಲ್ಲಿ ನೋಡುವ ಪ್ರಕರಣಗಳೇ ಹೆಚ್ಚು.

ಈಗಿನ ದಿನಗಳಲ್ಲಿ ಹೆಣ್ಣನ್ನು ಅಪ್ರಾಪ್ತ ವಯಸ್ಸಿನಲ್ಲಿಯೇ ಮದುವೆ ಮಾಡಿಸಿ ಮನೆಯಿಂದ ಹೊರಗೆ ಹಾಕುವುದು  ಕಡಿಮೆಯಾದಂತಿದೆ. ಅವಳು ಹೆಚ್ಚು ಹೆಚ್ಚು ಓದಲು ಇಷ್ಟಪಡುತ್ತಾಳೆ, ತನ್ನ ಕೆಲಸದಲ್ಲಿ ಮಗ್ನಳೂ ಆಗುತ್ತಾಳೆ. ಹಾಗಾಗಿ, ಅವಳಿಗೆ ಮದುವೆ ಅಷ್ಟು ಅನಿವಾರ್ಯವಾಗಿ ಕಾಣುವುದಿಲ್ಲ. ಮನೆಯ ಹಿರಿಯರಿಗೂ, ಅವಳು ತರುವ ಹಣ ಹಾಗೂ ಅದರ ಅನುಕೂಲತೆಗಳನ್ನು ತಾವು ಅನುಭವಿಸುತ್ತಿರುವಾಗ ಆವಳಿಗೆ ಮದುವೆ ಮಾಡಿಸಬೇಕೆಂಬ ಆತುರವೂ ಅಷ್ಟಾಗಿ  ಇದ್ದಂತಿರುವುದಿಲ್ಲ!

ಏನೇ ಇರಲಿ, ಅಂತಹ ಹೆಣ್ಣಿಗೆ ಆಗಾಗ ಒಂಟಿತನ ಕಾಡುವುದುಂಟು. ಮದುವೆಯಾಗಿ ಸುಖವಾಗಿರುವ ತನ್ನ ಸ್ನೇಹಿತರನ್ನು ನೋಡುವಾಗ, ಸಂಗಾತಿಗಾಗಿ ಹಪಹಪಿಸುವ ಕ್ಷಣಗಳೂ ಅವಳ ಬಾಳಿನಲ್ಲಿ ಹಾದು ಹೋಗುತ್ತವೆ. ಸಮಾಜ ತೋರುವ ಹುಸಿ ಅನುಕಂಪ ಅವಳಲ್ಲಿ ಕೋಪವನ್ನು ಎಬ್ಬಿಸುತ್ತದೆ. ತನ್ನ ದೇಹವು ಕಾದು ಬಿಸಿಯಾಗಿರುವಾಗ, ಅವಳು ಸಮಾಜಬಾಹಿರ ಸಂಬಂಧಗಳನ್ನು ಹಮ್ಮಿಕೊಳ್ಳುವುದೂ ಉಂಟು.

ಕೆಲವರ ಮೇಲಂತೂ ಕುಟುಂಬದ ಹೊಣೆಗಾರಿಕೆಯ ಭಾರ ಎತ್ತಿಡಲಾಗದ